ಶ್ರೀ ಶರಣಪ್ಪ.—ಈಗ ಗ್ರಾಮ ಲೆಕ್ಕಿಗರನ್ನು ಕೆಲವು ಜಿಲ್ಲೆಗಳಲ್ಲಿ ಮಾತ್ರ ನೇಮಕ ಮಾಡಿದ್ದಾರೆ, ಇಡೀ ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ನೇಮಕ ಮಾಡಿಲ್ಲ. ಇದಲ್ಲದೆ ಸುಪ್ರೀಂ ಕೋರ್ಟಿನ ತೀರ್ಮಾನದ ಪ್ರಕಾರ 1966 ರಿಂದ ಅಕೌಂಟೆಂಟರುಗಳ ಕೇಡರು, ಗ್ರೇಡು ಮುಂತಾದುವನ್ನು ನಿಗದಿ ಮಾಡಬೇಕಾಗಿತ್ತು. ಆದರೆ 1968ರಿಂದ ಮಾಡಿದ್ದಾರೆ. ಏಕೆ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈಗ 19 ಜಿಲ್ಲೆಗಳಲ್ಲಿ ಒಟ್ಟು 8,941 ಗ್ರಾಮ ಲೆಕ್ಕಿಗರ ಹುದ್ದೆಗಳಿವೆ. ಅದರ ಪೈಕಿ 16 ಜಿಲ್ಲೆಗಳಲ್ಲಿ ನೇಮಕ ಮಾಡಿ ಸಂಬಂಧಪಟ್ಟ ನೌಕರರು ಧಾರ್ಜುತೆಗೆದುಕೊಂಡಿದ್ದಾರೆ. ಉಳಿದ ಮೂರು ಜಿಲ್ಲೆಗಳಾದ ತುಮಕೂರು, ಬೆಂಗಳೂರು ಮತ್ತು ಗುಲ್ಬರ್ಗಗಳಲ್ಲಿ ಡಿ. ಸಿ. ನೂಕ್ತ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಅವರು ಸಂಬಂಧಪಟ್ಟ ಸಮಿತಿಯಲ್ಲಿ ಆರಿಸಿ ಪಟ್ಟಿಯನ್ನು ಡಿವಿಜನರ್ ಕಮಿಷನರಿಗೆ ಕಳಿಸಿರುವರು. ತುಮಕೂರು ಜಿಲ್ಲೆಯದಕ್ಕೆ ಒಪ್ಪಿಗೆ ದೊರೆತಿದೆ, ಉಳಿದ ಎರಡು ಜಿಲ್ಲೆಗಳದಕ್ಕೆ ದೊರೆಯಬೇಕಾಗಿದೆ. ಒಟ್ಟಿನಲ್ಲಿ ಸೇಕಡ 90 ಭಾಗ ಕೆಲಸವಾಗಿದೆ. ಹೈಕೋರ್ಟಿನ ತೀರ್ಮಾನದ ಪ್ರಕಾರ ಕೆಲವು ಕಡೆ 3 ವರ್ಷದ ನಂಬಳ ಕೊಡರಾಗಿದೆ. ಉಳಿದ ಕಡೆ ಕೊಡರಾಗುವುದು.

## Irrigation Project at Doddaguli

6. **Sri S. KARIAPPA** (Kanakapura).—

Will the Minister for Public Works and Electricity be pleased to state :—

(*a*) whether plans and estimates are prepared for the Irrigation Project at Doddaguli in Kanakapura Taluk ;

(*b*) if not, the stage at which it is pending ?

**Sri H. M. CHANNABASAPPA** (Minister for Public Works and Electricity).—

(*a*) Yes.

(*b*) Does not arise in view of reply to clause (*a*).

ಶ್ರೀ ಎಸ್. ಕರಿಯಪ್ಪ.—ಈ ಪ್ರಾಜೆಕ್ಟ್ ಕೆಳಗೆ ನೀರಾವರಿಯಾಗುವ ಪ್ರದೇಶವೆಷ್ಟು ಮತ್ತು ಇದಕ್ಕೆ ಸಂಬಂಧಪಟ್ಟ ಅಂದಾಜಿನ ವೆಚ್ಚವೆಷ್ಟು ?

†ಶ್ರೀ ಎಚ್. ಎಂ. ಚನ್ನಬಸಪ್ಪ.—1,450 ಎಕರೆ ಇದರಿಂದ ನೀರಾವರಿಯಾಗುವುದು ಎಂದು ಅಂದಾಜು ಮಾಡಲಾಗಿದೆ. ಈ ದಿವಸದ ದರದ ಪ್ರಕಾರ ಅಂದಾಜು ವೆಚ್ಚ 22 ಲಕ್ಷ ರೂಪಾಯಿ.

ಶ್ರೀ ಎಸ್. ಕರಿಯಪ್ಪ.—ಈ ಪ್ರಾಜೆಕ್ಟ್ ಮಾಡುವ ಸ್ಥಳ ಹಿಂದುಳಿದ ಪ್ರದೇಶವಾಗಿದೆ. ಅಲ್ಲಿ ನೀರಾವರಿ ಅನುಕೂಲವಿಲ್ಲ, ಇದ್ದರೂ ಕೇವಲ ಸ್ವಲ್ಪವಿದೆ. ಈ ದೃಷ್ಟಿಯಿಂದ ಈ ಅಂದಾಜನ್ನು ಜಾಗ್ರತೆ ಮಂಜೂರು ಮಾಡುವಿರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಈ ಯೋಜನೆ ಕಾರ್ಯ ಕೈಕೊಳ್ಳಬೇಕೆಂಬ ಉದ್ದೇಶವಿದೆ. ಹಣದ ಅಭಾವದಿಂದ ಈ ಕೆಲಸ ನಿಧಾನವಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಕೆಲಸವನ್ನು ಯಾವಾಗ ಕೈಕೊಳ್ಳಲಾಗುವುದೆಂಬುದನ್ನು ಖಚಿತವಾಗಿ ತಿಳಿಸುವಿರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಣ ದೊರೆತ ಕೂಡಲೆ ಇದಕ್ಕೆ ಮಂಜೂರಾತಿ ನೀಡಲು ಪ್ರಯತ್ನ ಮಾಡುತ್ತೇವೆ.